Dr. H.C. MAHADEVAPPA:- Sir, already the Government has taken steps to strengthen the Vigilance Wing and Quality Control Wing.

ಅಧ್ಯಕ್ಷರು:– ಮಾನ್ಯ ಹ್ಯಾರೀಸ್‌ರವರು ಹಾಜರಿಲ್ಲ. ಮಾನ್ಯ ರವಿಸುಬ್ರಮಣ್ಯರವರು ಮಾತನಾಡುವುದು.

ಪ್ರಶ್ನೆ ಸಂಖ್ಯೆ: 69(543)

ಶ್ರೀ ಎನ್.ಎ. ಹ್ಯಾರೀಸ್ (ಶಾಂತಿನಗರ)

(ಮಾನ್ಯ ಸದಸ್ಯರು ಗೈರು ಹಾಜರಿದ್ದರು)

ವಿದ್ಯುತ್ ಖರೀದಿ ಹಾಗೂ ವಿತರಣೆ

70(163); ಶ್ರೀ ರವಿಸುಬ್ರಮಣ್ಯ ಎಲ್.ಎ. (ಬಸವನಗುಡಿ)

ಅ) ಕಳೆದ 1 ವರ್ಷದಿಂದ ರಾಜ್ಯಕ್ಕೆ ಬೇಕಾಗಿರುವ ಹೆಚ್ಚಿನ ವಿದ್ಯುತ್‌ನ್ನು ಕೆ.ಪಿ.ಟಿ.ಸಿ.ಎಲ್ ಮುಖಾಂತರ ವಿವಿಧ ಕಂಪನಿಗಳಿಂದ ಯಾವ ಬೆಲೆಯಲ್ಲಿ ಖರೀದಿ ಮಾಡಲಾಗುತ್ತಿದೆ;

ಆ) ಹಾಗಿದ್ದಲ್ಲಿ, ಖರೀದಿಸಿದ ವಿದ್ಯುತ್‌ನ್ನು ಗೃಹ ಬಳಕೆ, ಕೈಗಾರಿಕೆ, ವಾಣಿಜ್ಯ ಹಾಗೂ ಕೃಷಿಗಾಗಿ ಯಾವ ಬೆಲೆಯಲ್ಲಿ ವಿತರಿಸಲಾಗಿದೆ;

ಇ) ಗೃಹ ಬಳಕೆ ವಿದ್ಯುತ್ ಸಂಪರ್ಕವನ್ನು ಅಕ್ರಮವಾಗಿ ವಾಣಿಜ್ಯ ಬಳಕೆಗಾಗಿ ಬಳಸುತ್ತಿರುವ ಎಷ್ಟು ದೂರುಗಳು ಬಂದಿರುತ್ತವೆ ಹಾಗೂ ಎಷ್ಟು ಪ್ರಕರಣಗಳು ಬೆಸ್ಕಾಂ ಜಾಗೃತ ದಳದಲ್ಲಿ ದಾಖಲಾಗಿವೆ (1ನೇ ಜನವರಿ 2013 ರಿಂದ 31.5.2014 ರವರೆಗೆ ವಿವರ ನೀಡುವುದು);

ಈ) ಇಂತಹ ಪ್ರಕರಣಗಳಲ್ಲಿ ಬೆಸ್ಕಾಂ ನಿಯಮಗಳನ್ವಯ ಗ್ರಾಹಕರ ಮೇಲೆ ಯಾವ ಕಠಿಣ ಕ್ರಮ ಕೈಗೊಳ್ಳಲಾಗುವುದು (ನಿಯಮದ ಪ್ರತಿ ಒದಗಿಸುವುದು);

ಉ) ಒಂದೇ ಮೀಟರ್ ಅಡಿಯಲ್ಲಿ 4–5 ಮನೆಗಳು ವಿದ್ಯುತ್ ಸಂಪರ್ಕವನ್ನು ಅಕ್ರಮವಾಗಿ ಬಳಸುತ್ತಿರುವವರ ವಿರುದ್ಧ ಬೆಸ್ಕಾಂ ನಿಯಮಗಳ ಪ್ರಕಾರ ಯಾವ ಯಾವ ಶಿಸ್ತು ಕ್ರಮಗಳನ್ನು ಕೈಗೊಳ್ಳಲಾಗುವುದು?

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು)

ಅ) ಕಳೆದ 2013–14ನೇ ಸಾಲಿನಲ್ಲಿ ರಾಜ್ಯಕ್ಕೆ ಬೇಕಾಗಿರುವ ಹೆಚ್ಚಿನ ವಿದ್ಯುತ್ತನ್ನು ಪಿ.ಸಿ.ಕೆ.ಎಲ್. ಮುಖಾಂತರ ವಿವಿಧ ಕಂಪನಿಗಳಿಂದ ಖರೀದಿಸಲಾಗಿದೆ. ವಿವರಗಳನ್ನು ಅನುಬಂಧ–1 ರಲ್ಲಿ ಒದಗಿಸಲಾಗಿದೆ.

ಆ) ಖರೀದಿಸಿದ ವಿದ್ಯುತ್ ರಾಜ್ಯದ ವಿದ್ಯುತ್ ಜಾಲಕ್ಕೆ ಸೇರ್ಪಡೆಯಾಗುತ್ತಿದ್ದು, ಸದರಿ ವಿದ್ಯುತ್ ಯಾವ ವರ್ಗದ ಗ್ರಾಹಕರಿಗೆ ವಿತರಿಸಲಾಗಿದೆ ಎಂದು ಹೇಳಲು ಬರುವುದಿಲ್ಲ. ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ವಿವಿಧ ಜಕಾತಿಗಳಿಗೆ ನಿಗದಿಪಡಿಸಿದ ದರಗಳಂತೆ ಗ್ರಾಹಕರಿಗೆ ವಿದ್ಯುತ್ತನ್ನು ವಿತರಿಸಲಾಗುತ್ತಿದೆ.

ಇ) ಗೃಹ ಬಳಕೆ ವಿದ್ಯುತ್ ಸಂಪರ್ಕವನ್ನು ಅಕ್ರಮವಾಗಿ ವಾಣಿಜ್ಯ ಬಳಕೆಗಾಗಿ ಬಳಸುತ್ತಿರುವ ಬಗ್ಗೆ ಬೆಸ್ಕಾಂ ಜಾಗೃತ ದಳದಲ್ಲಿ ದಿನಾಂಕ: 1–1–2013 ರಿಂದ 31–5–2014 ರವರೆಗೆ ದಾಖಲಾಗಿರುವ ಪ್ರಕರಣಗಳ ವಿವರಗಳು ಈ ಕೆಳಕಂಡಂತಿವೆ.

ಬೆಸ್ಕಾಂ ಜಾಗೃತದಳಕ್ಕೆ ಬಂದಿರುವ ದೂರುಗಳು (ಮೌಖಿಕ ಹಾಗೂ ದೂರವಾಣಿ ಮೂಲಕ ಬಂದಿರುವ ದೂರುಗಳು ಸೇರಿ)	ಬೆಸ್ಕಾಂ ಜಾಗೃತದಳದಲ್ಲಿ ದಾಖಲಾಗಿರುವ ಪ್ರಕರಣಗಳು
24	741

ಈ) ಇಂತಹ ಪ್ರಕರಣಗಳನ್ನು ಬೆಸ್ಕಾಂ ನಿಯಮಗಳನ್ವಯ ಜಕಾತಿಯ ದುರುಪಯೋಗ ಎಂದು ಪರಿಗಣಿಸಿ, ಬಳಕೆದಾರರ ವಿರುದ್ಧ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿಯಮ 42.02ರ ಅನ್ವಯ

ಕ್ರಮ ಕೈಗೊಳ್ಳಲಾಗುವುದು. ನಿಯಮದ ಪ್ರತಿಯನ್ನು **ಅನುಬಂಧ–2** ರಲ್ಲಿ ಒದಗಿಸಲಾಗಿದೆ.

ಊ) ಇಂತಹ ಪ್ರಕರಣಗಳನ್ನು ಅನಧಿಕೃತ ವಿದ್ಯುತ್ ವಿಸ್ತರಣೆ (Unauthorised Extension of Supply) ಎಂದು ಪರಿಗಣಿಸಿ ಬಳಕೆದಾರರ ವಿರುದ್ಧ KERC ನಿಯಮದ 42.05ರ ಅನ್ವಯ ಕ್ರಮಕೈಗೊಂಡು ಪ್ರಕರಣಗಳನ್ನು ದಾಖಲುಮಾಡಿ ತಕ್ಷಣ ಸ್ಥಾವರದ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿ ದಂಡವನ್ನು ವಿಧಿಸಲಾಗುವುದು. ನಿಯಮದ ಪ್ರತಿಯನ್ನು ಅನುಬಂಧ–3 ರಲ್ಲಿ ಲಗತ್ತಿಸಲಾಗಿದೆ.

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ರವಿಸುಬ್ರಮಣ್ಯ. ಎಲ್.ಎ (ಬಸವನಗುಡಿ) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 163ಕ್ಕೆ ಅನುಬಂಧ-1

2013-14ನೇ ಸಾಲಿನಲ್ಲಿ ರಾಜ್ಯಕ್ಕೆ ಬೇಕಾಗಿರುವ ಹೆಚ್ಚಿನ ವಿದ್ಯುತ್ತನ್ನು ಪಿ.ಸಿ.ಕೆ.ಎಲ್. ಮುಖಾಂತರ ವಿವಿಧ ಕಂಪನಿಗಳಿಂದ ಖರೀದಿಸಲಾಗಿರುವ ವಿದ್ಯುತ್‌ನ ವಿವರಗಳು

ಕಂಪನಿ ಹೆಸರು	ಮಿಲಿಯನ್ ಯೂನಿಟ್ ಗಳಲ್ಲಿ	ಸರಾಸರಿ ಪ್ರತಿ ಯೂನಿಟ್ ಗೆ (ರೂ. ಗಳಲ್ಲಿ)	ಮೊತ್ತ (ರೂ. ಕೋಟಿ ಗಳಲ್ಲಿ)	ಒಪನ್ ಆಕ್ಸೆಸ್‌ನ್ನು ಒಳಗೊಂಡಿದೆ ಮೊತ್ತ (ರೂ. ಕೋಟಿ ಗಳಲ್ಲಿ)	ಮೊತ್ತ (ರೂ. ಕೋಟಿಗಳಲ್ಲಿ)
ಮಧ್ಯಮಾವಧಿ ವಿದ್ಯುತ್					
ಬಿ.ಎಮ್.ಎಮ್. ಐ.ಎ.ಪಿ.ಟಿ.ಸಿ	54.72	4.10	22.44	0.00	22.44
ಜೆ.ಎಸ್. ಡಬ್ಲ್ಯೂ. ಪಿ.ಟಿ.ಸಿ.	816.69	4.26	347.91	0.00	347.91
ಎನ್.ಇ.ಟಿ.ಎಸ್ - 100 ಮೆ.ವ್ಯಾ.	164.08	3.75	61.53	4.37	65.90
ಎನ್.ಇ.ಟಿ.ಎಸ್ - 150 ಮೆ.ವ್ಯಾ.	241.60	3.92	94.71	5.99	100.70

ಜಿ.ಯು.ವಿ.ಎನ್.ಎಲ್.	1047.34	4.50	435.85	21.57	457.42
ಐಡಿಯಲ್ ಎನರ್ಜಿ ಪ್ರಾಜೆಕ್ಟ್ಸ್	29.27	4.14	12.12	0.25	12.37
ಜೆ.ಎಸ್. ಡಬ್ಲ್ಯೂ. ಪಿ.ಟಿ.ಸಿ.	1963.09	5.20	1020.80	0.00	1020.80
ಇ.ಎಸ್.ಎಸ್.ಎ.ಆರ್	31.08	4.30	13.36	0.72	14.08
ಒಟ್ಟು	4347.87		2008.72	32.91	2041.62
		ಅಲ್ಪಾವಧಿ ವಿದ್ಯುತ್			
ಜಿ.ಯು.ವಿ.ಎನ್.ಎಲ್.	55.19	4.75	26.21	1.17	27.38
ಬಿ.ಎ೦.ಎ೦. ಐ.ಎಸ್.ಪಿ.ಎ.ಟಿ.	480.64	5.50	264.35	0.00	264.35
ಗ್ಲೋಬಲ್ ಎನರ್ಜಿ	36.03	5.50	19.81	0.00	19.81
ಜೆ.ಎಸ್. ಡಬ್ಲ್ಯೂ. ಪಿ.ಟಿ.ಸಿ.	128.15	5.50	70.48	0.00	70.48
ಟಾಟಾ ಪವರ್	72.61	5.50	39.93	0.00	39.93
ರಿಲಯನ್ಸ್	84.41	5.50	46.42	0.00	46.42
ಹರೀಕೃಷ್ಣ	28.46	5.50	15.65	0.00	15.65

ಧ್ರುವದೇಶ್	38.70	5.50	21.29	0.00	21.29
ಪಿ.ಟಿ.ಸಿ.ಐ.ಎಲ್ (ಶಾತವಾಹನ)	14.87	5.50	8.18	0.00	8.18
ಎನ್.ಎಸ್.ಎಲ್. ಷುಗರ್ಸ್	65.73	5.50	36.15	0.00	36.15
ಪಿ.ಟಿ.ಸಿ.ಐ.ಎಲ್ (ಅಥಣಿ ಷುಗರ್ಸ್)	58.92	5.50	32.41	0.00	32.41
ವಿಜಯನಗರ ಷುಗರ್ಸ್	64.62	5.50	35.54	0.00	35.54
ಜೆ.ಎಸ್. ಡಬ್ಲ್ಯೂ. ಪಿ.ಟಿ.ಸಿ. (7.5 ಮೆ.ವ್ಯಾಟ್) (ಧಾರವಾಡ)	23.41	5.50	12.88	0.00	12.88
ರಿಲಯನ್ಸ್ (ನಿಶಾನಿ ಶುಗರ್ಸ್)	103.38	5.50	56.86	0.00	56.86
ರಿಲಯನ್ಸ್ (ಶಾಮನೂರ ಶುಗರ್ಸ್)	25.44	5.50	13.99	0.00	13.99
ರಿಲಯನ್ಸ್ (ಇಂಡಿಯನ್ ಕೇನ್))	32.88	5.50	18.08	0.00	18.08
ಎನ್.ಎಸ್.ಎಲ್. (ತುಂಗಭದ್ರಾ)	62.78	5.50	34.53	0.00	34.53
ಗ್ಲೋಬಲ್ (ಅಗ್ರವಾಲ್ ಸ್ಟಾಂಜ್)	24.31	5.50	13.37	0.00	13.37
ಗ್ಲೋಬಲ್ (ಶಿವಶಕ್ತಿ ಶುಗರ್ಸ್)	24.84	5.50	13.66	0.00	13.66

ಗ್ಲೋಬಲ್ (ದೂಡ್ ಗಂಗಾ)	27.51	5.50	15.13	0.00	15.13
ಎನ್.ಎಸ್.ಎಲ್. (ಹಲಂದಿ)	54.36	5.50	29.90	0.00	29.90
ಪಿ.ಟಿ.ಸಿ.ಐ.ಎಲ್ (ಜಂಕೆ)	16.92	5.50	9.31	0.00	9.31
ಗ್ಲೋಬಲ್ (ಇಂಡಿಯನ್ ಶುಗರ್ಸ್)	12.35	5.50	6.79	0.00	6.79
ಸತೀನ್ ಶುಗರ್ಸ್)	51.20	5.50	28.16	0.00	28.16
ಟಾಟಾ ಪವರ್ (ಶಾಂತ)	17.84	5.50	9.81	0.00	9.81
ಗ್ಲೋಬಲ್ (ಜಮಖಂಡಿ-ಯೂನಿಟ್-1)	39.31	5.50	21.62	0.00	21.62
ಗ್ಲೋಬಲ್ (ಜಮಖಂಡಿ-ಯೂನಿಟ್-2)	29.04	5.50	15.97	0.00	15.97
ಟಾಟಾ ಪವರ್ (ವಿಶ್ವನಾಥ ಶುಗರ್ಸ್)	37.62	5.50	20.69	0.00	20.69
ಟಾಟಾ ಪವರ್ (ಹಿರಣ್ಯಕೇಶಿ)	33.26	5.50	18.30	0.00	18.30

ಪಿ.ಟಿ.ಸಿ.ಐ.ಎಲ್ (ಚಾಮುಂಡೇಶ್ವರಿ)	34.56	5.50	19.01	0.00	19.01
ಪಿ.ಟಿ.ಸಿ.ಐ.ಎಲ್ (ಜೆಮ್ ಶುಗರ್ಸ)	22.51	5.50	12.38	0.00	12.38
ಪಿ.ಟಿ.ಸಿ.ಐ.ಎಲ್ (ಪ್ರಭುಲಿಂಗೇಶ್ವರ)	58.08	5.50	31.94	0.00	31.94
ಪಿ.ಟಿ.ಸಿ.ಐ.ಎಲ್ (ರೇಣುಕ ಶುಗರ್ಸ)	32.40	5.50	17.82	0.00	17.82
ಜೆ.ಎಸ್. ಡಬ್ಲ್ಯೂ. ಪಿ.ಟಿ.ಸಿ. (7.5 ಮೆ.ವ್ಯಾಟ್) (ಹಾವೇರಿ)	19.08	5.50	10.49	0.00	10.49
ಜೆ.ಎಸ್. ಡಬ್ಲ್ಯೂ. ಪಿ.ಟಿ.ಸಿ. (100 ಮೆ.ವ್ಯಾಟ್)	185.92	5.50	102.26	0.00	102.26
ಒಟ್ಟು	2097.32		1149.39	1.17	1150.55
ಇಂಡಿಯನ್ ಎನರ್ಜಿ ಎಕ್ಸ್‌ಚೇಂಜ್					
ಮಾರ್ಚ್ -2014	4.42	5.77	2.45	0.10	2.55
ಒಟ್ಟು	4.42	5.77	2.45	0.10	2.55
ಒಟ್ಟು ಮಹಾ ಮೊತ್ತ	6449.61	4.95	3160.55	34.17	3194.73

ಶ್ರೀ ಎಲ್.ಎ. ರವಿ ಸುಬ್ರಮಣ್ಯ:– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಖರೀದಿಸಿದ ವಿದ್ಯುತ್ ಅನ್ನು ಕೈಗಾರಿಕೆ, ಗೃಹ ಬಳಕೆಗೆ, ವಾಣಿಜ್ಯ ಕೃಷಿಗಾಗಿ ಯಾವ ಬೆಲೆಯಲ್ಲಿ ವಿತರಣೆ ಮಾಡುತ್ತಿದ್ದೀರಿ ಎಂದು ಪ್ರಶ್ನೆಯನ್ನು ಕೇಳಲಾಗಿತ್ತು. ಅದಕ್ಕೆ ನಾವು ಗ್ರಿಡ್ ಮುಖಾಂತರ ವಿತರಣೆ ಮಾಡುತ್ತೇವೆ ಯಾವ ಗ್ರಾಹಕರಿಗೆ ವಿತರಣೆ ಮಾಡುತ್ತಿದ್ದೇವೆ ಎಂದು ಹೇಳುವುದಕ್ಕಾಗುವುದಿಲ್ಲ ಎಂದು ಹೇಳಿದ್ದಾರೆ. ನಾನು ಅದನ್ನು ಕೇಳಿಲ್ಲ. ಮುಂದುವರೆದಂತೆ ಜಕಾತಿಗಳು ನಿಗದಿಪಡಿಸಿದ ದರದಂತೆ ಎಂದು ಹೇಳಿದ್ದಾರೆ. ನಾನು ಆ ದರವನ್ನು ಯಾವುದು ನಿಗದಿಪಡಿಸಿದ್ದಾರೆ ಎಂದು ಕೇಳಿದ್ದೇನೆ. ಇವತ್ತು ನಾವು ಜಾಸ್ತಿ ಬೆಲೆಯಲ್ಲಿ ವಿದ್ಯುತ್ ಅನ್ನು ಏನು ಕೊಂಡುಕೊಳ್ಳುತ್ತಿದ್ದೇವೆ, ಅದನ್ನು ತಪ್ಪಿಸುವ ಸಲುವಾಗಿ renewable energy ಬಗ್ಗೆ ತಾವು ಏನಾದರೂ ಕ್ರಮ ಹಾಕಿಕೊಂಡಿದ್ದರೆ ಅದು ಏನು? ಜೊತೆಗೆ 1,000 ಮೆಗಾ ವ್ಯಾಟ್ ವಿದ್ಯುಚ್ಛಕ್ತಿಯನ್ನು ನಾವು ಸೋಲಾರ್ energy ಮುಖಾಂತರವಾಗಿ ಪಡೆದುಕೊಳ್ಳುತ್ತೇವೆ ಎಂದು ಹೇಳಿದ್ದೀರಿ. ಇದನ್ನು ನೀವು ಬೇರೆ ಬೇರೆ ಭಾಗದಲ್ಲಿ ವಿದ್ಯುಚ್ಛಕ್ತಿಗೆ ಅವಕಾಶವನ್ನು ಕೊಡುತ್ತೀರೋ ಅಥವಾ ಒಂದೇ ಕಡೆ ಈ ವಿದ್ಯುತ್ ಅನ್ನು generate ಮಾಡುತ್ತೀರಾ ಎನ್ನುವುದು. ಜಾಗೃತ ದಳದ ಬಗ್ಗೆ ಕೇಳಿದಾಗ, ಜಾಗೃತ ದಳದ ಅಧಿಕಾರಿಗಳು ತಮ್ಮ ಹೆಚ್ಚಿನ ಸಮಯ ಕಛೇರಿಯೊಳಗೇ ಕಳೆಯುತ್ತಿದ್ದಾರೆ ಎಂದು ತಾವು ಮೊನ್ನೆ ಒಂದು statement ಕೊಟ್ಟಿದ್ದೀರಿ. ಅವರು ಸರಿಯಾದಂತಹ ರೀತಿಯಲ್ಲಿ ಕೆಲಸ ಮಾಡಲಿಕ್ಕೆ ಯಾವ ಕ್ರಮ ತೆಗೆದುಕೊಳ್ಳುತ್ತೀರಿ. ಇಂತಹವರ ಬಗ್ಗೆ ಏನೇನು ಕಠಿಣ ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ತಿಳಿಸಬೇಕು.

ಶ್ರೀ ಡಿ.ಕೆ. ಶಿವಕುಮಾರ್ (ಮಾನ್ಯ ಇಂಧನ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು 5–6 major ಪ್ರಶ್ನೆಗಳನ್ನು ಕೇಳಿದ್ದಾರೆ. ಎಲ್ಲೆಲ್ಲಿಂದ ವಿದ್ಯುತ್ ಅನ್ನು ಖರೀದಿ ಮಾಡಿದ್ದೇವೆ ಎನ್ನುವ ಲಿಸ್ಟ್ ಕೊಟ್ಟಿದ್ದೇನೆ. ಬಹುಶಃ ಅವರಿಗೆ ಸಮಾಧಾನವಾಗಿರಬಹುದು. ಖರೀದಿಸಿದ ವಿದ್ಯುತ್ ಅನ್ನು ಗೃಹ ಬಳಕೆ, ಕೈಗಾರಿಕೆ, ವಾಣಿಜ್ಯ ಹಾಗೂ ಕೃಷಿಗಾಗಿ ಯಾವ ಬೆಲೆಯಲ್ಲಿ ವಿತರಿಸಲಾಗಿದೆ ಎಂದು ಕೇಳಿದ್ದಾರೆ. KERC ಯದ್ದು ಒಂದು ದೊಡ್ಡ ಪುಸ್ತಕ

ಇದೆ. ಅವರು Tariff ಅನ್ನು fix ಮಾಡುತ್ತಾರೆ. ಗೃಹ ಬಳಕೆ ಎಷ್ಟು, ಒಂದು ಯೂನಿಟ್‌ಗೆ 250 ಪೈಸೆಯಿಂದ ಹಿಡಿದು 585 ಪೈಸೆಯವರೆಗೂ ಒಂದೊಂದು ಮನೆಗಳಿಗೆ, ಅದು ಒಂದೊಂದು ಫೇಸ್ ಮೇಲೆ, ಯಾರು ಜಾಸ್ತಿ ವಿದ್ಯುತ್ ಅನ್ನು ಬಳಕೆ ಮಾಡಿಕೊಂಡಿರುತ್ತಾರೋ ಅವರಿಗೆ ಜಾಸ್ತಿ ಬೆಲೆಯಾಗುತ್ತದೆ. ಅದೇ ರೀತಿ LT connection ನಲ್ಲಿಯೂ ಕೂಡ 200–535 ಯೂನಿಟ್‌ವರೆಗೂ ಹೋಗುತ್ತದೆ. ಕೈಗಾರಿಕೆಗೂ ಅಷ್ಟೇ, ಸುಮಾರು 445 ಪೈಸೆಯಿಂದ ಹಿಡಿದು ಒಟ್ಟು 525 ಪೈಸೆಯವರೆಗೂ ಸಾವಿರ ಯೂನಿಟ್‌ವರೆಗೂ ಹೋಗುತ್ತದೆ. ವಾಣಿಜ್ಯಕ್ಕೆ ಗ್ರಾಮೀಣ ಪ್ರದೇಶದಲ್ಲಿ 645 ಪೈಸೆಯಿಂದ ಹಿಡಿದು 695 ಪೈಸೆಯವರೆಗೂ ಹೋಗುತ್ತದೆ. ನಗರ ಪ್ರದೇಶದಲ್ಲಿ 745 ಪೈಸೆ ವರೆಗೂ ಮಾಡುತ್ತಾರೆ. HT ಗೆ ನಗರ ಪ್ರದೇಶದಲ್ಲಿ 695 ಪೈಸೆಯಿಂದ ಹಿಡಿದು 725 ಪೈಸೆಯವರೆಗೆ ಮಾಡುತ್ತಾರೆ. ಇವೆಲ್ಲವನ್ನೂ KERC ನವರು ತೀರ್ಮಾನ ಮಾಡುತ್ತಾರೆ. ಇದು ನಮ್ಮ control ನಲ್ಲಿ ಇಲ್ಲ. ನಾವು ಏನು ಖರೀದಿ ಮಾಡುತ್ತೇವೆ ಅದರ ಮೇಲೆ ಖರ್ಚು ಏನಾಗುತ್ತದೆ, ಅವರು ಏನು ಖರೀದಿ ಮಾಡುತ್ತೇವೆ ಅದರ ಮೇಲೆ ಖರ್ಚು ಏನಾಗುತ್ತದೆ, ಅವರು ಏನು ಖರೀದಿ ಮಾಡುತ್ತಾರೆ ಎಂಬ ಬಗ್ಗೆ ತೀರ್ಮಾನ ಮಾಡುವವರು, ರೇಟ್ ಕೊಡುವುದು ಅವರು ಮಾಡುತ್ತಾರೆ. ನಿಮ್ಮಂತಹವರು ಹೋಗಿ ಜಾಸ್ತಿ ಇದ್ದರೆ, ಕಡಿಮೆ ಇದ್ದರೆ objection ಅನ್ನು file ಮಾಡಬಹುದು. ಅಕ್ರಮವಾಗಿ ವಿದ್ಯುತ್ ಬಳಕೆ ಮಾಡುತ್ತಿರುವುದರ ಬಗ್ಗೆ ನಾವು complaint ಮಾಡಿದ್ದೇವೆ. ಅದಕ್ಕೆಲ್ಲಾ ಬೇಕಾದಷ್ಟು conditions ಇದೆ. ಯಾರ್ಯಾರು ವಿದ್ಯುತ್ ಕಳ್ಳತನ ಮಾಡುತ್ತಿದ್ದಾರೆ ಅವರಿಗೆ 6 ತಿಂಗಳದ್ದು back billing, double time ಹಾಕಿ ಸುಮಾರು ಕೇಸ್‌ಗಳನ್ನು ಹಾಕುತ್ತಿದ್ದೇವೆ. ಈ ಒಂದು ದೊಡ್ಡ drive ಅನ್ನು ತೆಗೆದುಕೊಂಡಿದ್ದೇವೆ. ಎಲ್ಲೆಲ್ಲಿ ವಿದ್ಯುತ್ misuse ಆಗುತ್ತಿದೆ, ಎಲ್ಲೆಲ್ಲಿ illegal connections ಆಗುತ್ತಿದೆ ಎಂದು ಪರಿಶೀಲಿಸಲು ಎಲ್ಲರಿಗೂ ಒಂದು target ಕೊಟ್ಟಿದ್ದೇನೆ. ನಿರಂತರ ಜ್ಯೋತಿಗೆ ಸಂಬಂಧಿಸಿದಂತೆ ಹೊಸದಾಗಿ ಯೋಜನೆಯನ್ನು ಘೋಷಣೆ ಮಾಡಲು ಬಯಸುತ್ತೇನೆ. ನಿರಂತರ ಜ್ಯೋತಿ ಹಳ್ಳಿಗಳಲ್ಲಿ ನಾವು ಈಗ ಪ್ರಾರಂಭ

ಮಾಡಿದ್ದೇವೆ. ಈಗ ಹೆಚ್ಚು ಕಡಿಮೆ ಅಲ್ಲಿ 60% ಕೆಲಸಗಳು ಆಗಿದೆ. ಇನ್ನೂ 30% ನಷ್ಟು ಕೆಲಸ ಆಗಬೇಕಾಗಿದೆ. ಇದಕ್ಕಾಗಿ separate line connection ಕೊಡಬೇಕೆಂದು ಮಾಡುತ್ತಿದ್ದೇವೆ. ಸಿಟಿಗಳಿಗೆ 24 hours power ಕೊಡಬೇಕೆಂದು ಮಾಡುತ್ತಿದ್ದೇವೆ. ಇಲ್ಲಿ misuse ಆಗುವಂತಹದ್ದು ಬೇಕಾದಷ್ಟು ಸನ್ನಿವೇಶಗಳು ಕಾಣುತ್ತಿದೆ. ಅದಕ್ಕಾಗಿ ನಾವು ಒಂದು special programme ಅಂದರೆ ಯಾರ್ಯಾರು ಈ ನಿರಂತರ ಜ್ಯೋತಿಯಲ್ಲಿ ವಿದ್ಯುತ್ ಕಳ್ಳತನವನ್ನು ಮಾಡುತ್ತಾರೆ ಈ ಬಗ್ಗೆ ನಾವು informant ನವರಿಗೆ 2000 ರೂಪಾಯಿಗಳನ್ನು ಕೊಡಬೇಕೆಂಬ ಬಗ್ಗೆ ನಾವು ತೀರ್ಮಾನ ಮಾಡಿದ್ದೇವೆ. ಈ ನಿರಂತರ ಜ್ಯೋತಿ fail ಆದರೆ, the entire system fail ಆಗಿಬಿಡುತ್ತದೆ. ವಿದ್ಯುತ್ ಕಳ್ಳತನ ಆಗುವುದನ್ನು ವಿಶೇಷವಾಗಿ ತಡೆಗಟ್ಟಬೇಕು. 24 ಗಂಟೆಗಳ ಕಾಲ ವಿದ್ಯುಚ್ಛಕ್ತಿ ಹೋಗಬೇಕು. ಅಲ್ಲಿ ವಿದ್ಯುತ್ ಪೋಲಾಗಬಾರದು. ಏಕೆಂದರೆ ಯಾವಾಗಲೂ ಕೂಡ power ಅಲ್ಲಿ run ಆಗುತ್ತಿರುತ್ತದೆ. ಅದಕ್ಕಾಗಿ ನಾವು Rural Feeder ಅನ್ನು Irrigation Feeder ಅನ್ನು ಬೇರೆ ಬೇರೆ ಮಾಡಿ ಒಂದು ವ್ಯಾಪಕವಾಗಿ ಹೋಗುತ್ತಿದ್ದೇವೆ. ನೀವು 4ನೇ ಪ್ರಶ್ನೆ ಸೋಲಾರ್ ವಿಚಾರಕ್ಕೆ ಸಂಬಂಧಿಸಿದಂತೆ ಏನು ಕೇಳಿದ್ದೀರಿ, ಇದರಲ್ಲಿ 1,000 ಮೆಗಾವ್ಯಾಟ್ ಈ ವರ್ಷ ಮಾಡಬೇಕೆಂದು ನಮ್ಮ planನಲ್ಲಿದೆ. ಅದಕ್ಕಾಗಿ ನಾವು ಒಂದು ಹೊಸ ಪಾಲಿಸಿಯನ್ನೂ ತಂದಿದ್ದೇವೆ. 500 ಮೆಗಾವ್ಯಾಟ್‌ನಷ್ಟು ನಾವು ಟೆಂಡರ್ ಕರೆದಿದ್ದೇವೆ. ಇನ್ನು 300 ಮೆಗಾವ್ಯಾಟ್ ರೈತರಿಗೆ distribute ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಅವರು ಎಲ್ಲಿ ಬೇಕಾದರೂ ಹಾಕಿಕೊಳ್ಳಬಹುದು. ಇನ್ನು 200 ಮೆಗಾವ್ಯಾಟ್‌ನಷ್ಟು Roof topಗೆ ಅವಕಾಶ ಮಾಡಿಕೊಟ್ಟಿದ್ದೇವೆ. ಇದರಲ್ಲಿ last time ಸ್ವಲ್ಪ failure ಆಯಿತು. ಈಗ ನಾವು ಹೊಸದಾಗಿ grid connection, ಮನೆಯೊಳಗಡೆ ಮನೆಯ ಮೇಲೆಯೇ excess ಅನ್ನು ಹಾಕಿಕೊಂಡು, ಅಲ್ಲಿಯೇ ಮೀಟರ್ ಹಾಕಿಕೊಡುವಂತಹ ವ್ಯವಸ್ಥೆ ಮಾಡಿದ್ದೇನೆ.

ಅಧ್ಯಕ್ಷರು:– ಅವರು ಆ ಪ್ರಶ್ನೆಯನ್ನು ಕೇಳಲಿಲ್ಲ.

ಶ್ರೀ ರವಿಸುಬ್ರಮಣ್ಯ ಎಲ್.ಎ:– ಉಪಪ್ರಶ್ನೆಯೊಳಗೆ ಕೇಳಿದ್ದೆ.

ಅಧ್ಯಕ್ಷರು:– ಯಾವುದರಲ್ಲಿ? ನಿಮ್ಮ ಮುಖ್ಯ ಪ್ರಶ್ನೆ ಏನಿದೆ?

ಶ್ರೀ ರವಿಸುಬ್ರಮಣ್ಯ ಎಲ್.ಎ:– ಈ excessive rate ಅನ್ನು ಏನು ತೆಗೆದುಕೊಳ್ಳುತ್ತಿದ್ದಾರೆ, renewable energy ಬಗ್ಗೆ ಏನು ತೆಗೆದುಕೊಳ್ಳುತ್ತೀರಿ ಎಂದು ಉಪಪ್ರಶ್ನೆಯಲ್ಲಿ ಕೇಳಿದ್ದೆ. ಅದಕ್ಕೆ ಉತ್ತರವನ್ನು ಹೇಳುತ್ತಿದ್ದಾರೆ.

ಶ್ರೀ ಡಿ.ಕೆ. ಶಿವಕುಮಾರ್:– ಅದನ್ನು ಮಾಡುತ್ತಿದ್ದೇವೆ. ಇನ್ನು ಮುಂದೆ ಈ ಬಗ್ಗೆ detail discussion ಬರುತ್ತದೆ. ತಾವೆಲ್ಲರೂ ಅದರಲ್ಲಿ participate ಮಾಡಿ ತಾವು ಸೋಲಾರ್ ಅನ್ನು ಉಪಯೋಗಿಸುತ್ತಿದ್ದೀರಿ. ತಾವು ಈ ಬಗ್ಗೆ ಚರ್ಚೆಯಲ್ಲಿ ಭಾಗವಹಿಸಿ ತಮ್ಮಲ್ಲಿರುವಂತಹ ಅಪಾರವಾದಂತಹ ಅನುಭವದ ಮುಖಾಂತರ ಬೆಳಕನ್ನು ಚೆಲ್ಲಿದರೆ ಇದರಿಂದ ರಾಜ್ಯಕ್ಕೆ ನಿಮ್ಮಿಂದಲೂ contribution ಆಗುತ್ತದೆ.

ಅಧ್ಯಕ್ಷರು:– O.K.

ಶ್ರೀ ರವಿಸುಬ್ರಮಣ್ಯ ಎಲ್.ಎ:– ಮಾನ್ಯ ಸಚಿವರು ಒಳ್ಳೆಯ ನಿರ್ಧಾರವನ್ನು ತೆಗೆದುಕೊಂಡಿದ್ದಾರೆ. Renewable energyಗೆ ಹೆಚ್ಚು ಒತ್ತುಕೊಟ್ಟು ಗ್ರಾಮೀಣ ಪ್ರದೇಶಕ್ಕೆ ಸ್ವಲ್ಪ ಹೆಚ್ಚು ಅನುಕೂಲ ಮಾಡಿಕೊಡಲಿ.

ಅಧ್ಯಕ್ಷರು:– ಆಯಿತು.

ಶ್ರೀ ಡಿ.ಕೆ. ಶಿವಕುಮಾರ್:– Thank you.

ಅಧ್ಯಕ್ಷರು:– ಶ್ರೀ ಸಿದ್ದು ಬಿ. ನ್ಯಾಮಗೌಡರವರೆ, ತಮ್ಮ ಪ್ರಶ್ನೆ ಕೇಳಿ.